# ಎನ್ಐಟಿಕೆ: ಇನ್ಸಿಡೆಂಟ್ 2023 ಉದ್ಘಾಟನೆ

ಸುರತ್ಕಲ್, ಮಾ. 16: ಕೇಂದ್ರ ಸರಕಾರ ಜಾರಿ ಮಾಡಿರುವ ನೂತನ ಶಿಕ್ಷಣ ನೀತಿಯು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದೆ ಎಂದು ನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ ಅಭಿಪ್ರಾಯಪಟ್ಟರು.

ಸುರತ್ಕಲ್ ಎನ್ಐಟಿಕೆಯಲ್ಲಿ ಮೂರು ದಿನಗಳ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಇನ್ಸಿಡೆಂಟ್ 2023 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪದ್ಮಶ್ರೀ ತುಳಸಿ ಬೊಮ್ಮು ಗೌಡ ಅವರಿಗೆ ಸಮ್ಮಾನ ಕಾರ್ಯಕ್ರಮ ನೆರವೇರಿತು.

ಎನ್ಐಟಿಕೆ ಪ್ರಭಾರ ನಿರ್ದೇಶಕ ಜಿ.ಸಿ. ಮೋಹನ್, ರಿಜಿಸ್ಟ್ರಾರ್ ಕೆ. ರವೀಂದ್ರ ನಾಥ್, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಚೇರ್ಮನ್ ಡಾ| ಶಾಂತ್ ಎ. ತಿಮ್ಮಯ್ಯ, ಕಾರ್ಯಕ್ರಮದ ಸಂಚಾಲಕ ಸೂರ್ಯಕೌಶಿಕ್ ಉಪಸ್ಥಿತರಿದ್ದರು. ವಿದ್ಯಾರ್ಥಿ ಕಲ್ಯಾಣ ಡೀನ್ ಪ್ರೊ| ನರೇಂದ್ರ ನಾಥ್ ಸ್ವಾಗತಿಸಿದರು.

Udayavani, Date:17/03/23 p, no -11